ಅ) ಆಸ್ಪತ್ರೆಗಳ ತ್ಯಾಜ್ಯ ನಿರ್ವಹಣೆಗೆ ಇಲಾಖೆಯು ಹಾಲಿ ಅನುಸರಿಸುತ್ತಿರುವ ವಿಚಾರಗಳೇನು?

ಆ) ಆಸ್ಪತ್ರೆಗಳಲ್ಲಿ ವೈಜ್ಞಾನಿಕವಾಗಿ ಈ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆಯೇ?

ಇ) ಇದಕ್ಕಾಗಿ ವಿಶೇಷ ಕಾರ್ಯಪಡೆ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಆಲೋಚಿಸಿದೆಯೇ?

ಈ) ಕಾರ್ಯಪಡೆಯ ರಚನೆ ಯಾವ ಸ್ವರೂಪದ್ದಾಗಿರುತ್ತದೆ? ಇದರ ಕಾಲಮಿತಿ, ಕಾರ್ಯವ್ಯಾಪ್ತಿ ಏನು? ಇದರಲ್ಲಿ ಕಾರ್ಯನಿರ್ವಹಿಸುವವರು ಯಾರ್ಯಾರು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ತೆಗೆದುಕೊಂಡಿರುವ ಆಸ್ಪತ್ರೆಗಳ ತ್ಯಾಜ್ಯ ನಿರ್ವಹಣೆಯನ್ನು ದಿ ಬಯೋ ಮೆಡಿಕಲ್ ವೇಸ್ಟ್ ಅಂಡ್ ಹ್ಯಾಂಡಲಿಂಗ್ ರೂಲ್ಸ್ 1998ರ್ಲಲಿ ನಿಗದಿಪಡಿಸಿರುವಂತೆ ಮಾಡಲಾಗುತ್ತದೆ.

ಸದರಿ ನಿಮಯಗಳಂತೆ ಆಸ್ಪತ್ರೆಗಳಲ್ಲಿಯ ಸೋಂಕುರಹಿತ ಮತ್ತು ರೋಗದ ಸೋಂಕಿರುವ ತ್ಯಾಜ್ಯ ವಸ್ತುಗಳನ್ನು ಉತ್ಪಾದನಾ ಸ್ಥಳದಲ್ಲಿ ಬೇರ್ಪಡಿಸಲಾಗುತ್ತಿದೆ. ವಿಂಗಡಿಸಿರುವ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಅಗತ್ಯವಾದ ಇಂಜಿನಿಯರ್ಡ್ ಲ್ಯಾಂಡ್ ಫಿಲ್ಸ್ ಮತ್ತು ಡೀಪ್ ಬರಿಯರ್ ಗುಂಡಿಗಳನ್ನು ನಿರ್ಮಿಸಲಾಗಿದೆ. ವಿಂಗಡಿಸಲು ಅಗತ್ಯವಿರುವ ಉಪಕರಣಗಳನ್ನು ಒದಗಿಸಲಾಗಿದೆ.

ಸೋಂಕುರಹಿತ ತ್ಯಾಜ್ಯ ವಸ್ತುಗಳನ್ನು ಇಂಜಿನಿಯರ್ಡ್ ಲ್ಯಾಂಡ್ ಫಿಲ್ಸ್‌ನಲ್ಲಿ ತುಂಬಿಸಲಾಗುಗತ್ತದೆ. ಇದನ್ನು ಮುನಿಸಿಪಲ್ ಪ್ರಾಧಿಕಾರವು ಕಾಲಾನುಕಾಲಕ್ಕೆ ಸಾಗಿಸುತ್ತದೆ. ಸೋಂಕಾಗಿರುವ ತ್ಯಾಜ್ಯ ವಸ್ತುಗಳನ್ನು ಆಳವಾದ ಗುಂಡಿಗಳಲ್ಲಿ (ಡೀಪ್ ಬರಿಯರ್ ಪಿಟ್ಸ್‌ಗಳಲ್ಲಿ) ಹೂಳಲಾಗುತ್ತದೆ.

ಆಸ್ಪತ್ರೆಗಳಲ್ಲಿ ಬಳಸಲಾಗಿರುವ ಸೂಜಿಗಳನ್ನು ಸೋಂಕು ನಿವಾರಿಸಿ, ಶೇಖರಿಸಿ, ಪ್ರತ್ಯೇಕವಾದ ಗುಂಡಿಗಳಲ್ಲಿ ವಿಲೇವಾರಿ ಮಾಡಲಾಗುತ್ತದೆ. ಹಾಗೂ ಸಿರಿಂಜ್ ಮತ್ತು ಡ್ರಿಪ್ ಸೆಟ್‌ಗಳನ್ನು ಸೋಂಕು ನಿವಾರಿಸಿ ಇತರೆ ಪ್ಲಾಸ್ಟಿಕ್‌ಗಳೊಡನೆ ಶೇಖರಿಸಿ ವಿಲೇವಾರಿ ಮಾಡಲಾಗುತ್ತದೆ.

ಆಸ್ಪತ್ರೆಗಳಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ.

ಆ) ಹೌದು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ ಅವಧಿ ವಿಸ್ತರಣೆ

992 (1141) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿಗಳ ಅಧ್ಯಕ್ಷ - ಉಪಾಧ್ಯಕ್ಷರ ಅಧಿಕಾರಾವಧಿ ಎಷ್ಟು ತಿಂಗಳುಗಳನ್ನು ಈ ಹಿಂದೆ ನಿಗಧಿ ಮಾಡಲಾಗಿತ್ತು;

ಆ) ಈ ಅಧಿಕಾರಾವಧಿಯನ್ನು ಮೊಟಕುಗೊಳಿಸುವ ಅಥವಾ ವಿಸ್ತರಿಸುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಎಷ್ಟು ತಿಂಗಳಿಗೆ ಕಡಿತ ಮತ್ತು ವಿಸ್ತರಣೆಗೊಳಪಡಿಸಲಾಗುತ್ತಿದೆ; ಇವರ ಉದ್ದೇಶವೇನು.

ಈ) ಹಾಲಿ ಅವಧಿಕಾರಾವಧಿ ಎಲ್ಲಿಯವರೆಗೆ ಕೊನೆಗೊಳ್ಳುತ್ತದೆ.

ಉ) ವಿಸ್ತರಿಸುವ ಸರ್ಕಾರದ ಈ ತೀರ್ಮಾನದಿಂದಾಗಿ ಮುಂದಿನ ಅಧಿಕಾರಾವಧಿಗೆ ಆಯ್ಕೆಯಾಗುವ ಅಧ್ಯಕ್ಷರಿಗೆ ಈ ವಿಸ್ತರಣೆಯಿಂದ ಅವಧಿ ಕಡಿತ ಮಾಡಿದಂತಾಗುವುದಿಲ್ಲವೇ?

ಊ) ಇದಕ್ಕೆ ಸರ್ಕಾರದ ನಿಲುವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 30 ತಿಂಗಳುಗಳು

ಆ) ಇಲ್ಲ

ಇ) ರಾಜ್ಯವು ತೀವ್ರ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದ್ದುದರಿಂದ ದಿ:6-9-2002 ರಂದು ಹೊರಡಿಸಲಾದ ಸುಗ್ರಿವಾಜ್ಞೆ, ಮೇರೆಗೆ ಈ ಹಿಂದಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು 3 ತಿಂಗಳ ಕಾಲಾವಧಿಗೆ ಮಾತ್ರ ವಿಸ್ತರಣೆ ಮಾಡಲಾಗಿತ್ತು, ಆದ್ದರಿಂದ, ಪ್ರಸ್ತಕ ಅಧ್ಯಕ್ಷ, ಉಪಾಧ್ಯಕ್ಷರ ಅವಧಿ 3 ತಿಂಗಳು ಮೊಟಕಾಗಿರುತ್ತದೆ.

ಈ) ಹಾಲಿಯಿರುವ ಅಧ್ಯಕ್ಷ, ಉಪಾಧ್ಯಕ್ಷರ ಅವಧಿ ಅವರು ಅಧ್ಯಕ್ಷ ಉಪಾಧ್ಯಕ್ಷರಾಗಿ ಚುನಾಯಿತರಾದ ದಿನಾಂಕದಿಂದ 27 ತಿಂಗಳ ಅವಧಿಯದ್ದಾಗಿರುತ್ತದೆ.

ಉ) ಹೌದು

ಊ) ಬರಗಾಲ ಪರಿಸ್ಥಿತಿ ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ಹಿಂದಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು 3 ತಿಂಗಳುಗಳವರೆಗೆ ಮುಂದುವರಿಸಲಾಗಿತ್ತು.

ರಾಜ್ಯದಲ್ಲಿ ಹೊಸದಾಗಿ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ

993 (1142) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರಾಜ್ಯದಲ್ಲಿರುವ ವಿದ್ಯಾರ್ಥಿಗಳಿಗನುಗುಣವಾಗಿ ಇರಬೇಕಾದ ಕಾಲೇಜುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಹೊಸದಾಗಿ ಪದವಿ ಪೂರ್ವ ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆಯೇ? ಇದ್ದಲ್ಲಿ ಎಷ್ಟು ಕಾಲೇಜುಗಳನ್ನು ಯಾವ ತಾಲ್ಲೂಕುಗಳಲ್ಲಿ ಸ್ಥಾಪಿಸಲಾಗುವುದು?

ಈ) ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ನೀಡಿದೆಯೇ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) 1. ಸರ್ಕಾರಿ ಪದವಿ ಪೂರ್ವ ಕಾಲೇಜುಗಳು - 686

2. ಅನುದಾನಿತ ಪದವಿ ಪೂರ್ವ ಕಾಲೇಜುಗಳು - 537

3. ಅನುದಾನಿತ ರಹಿತ ಪದವಿ ಪೂರ್ವ ಕಾಲೇಜುಗಳು - 752

(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.)